ಕೇಳಿ ರೋಮಾಂಚಿತರಾಗಿದ್ದ ನಾವು ಸಿಗುವ ಅಂಥ ಎಲ್ಲ ಪ್ರದರ್ಶನಗಳನ್ನೂ ನೋಡಿಕೊಂಡು ಬರಬೇಕೆಂದು ನಿಶ್ಚಯಿಸಿದ್ದೆವು. ಕಡೆಯ ಗಳಿಗೆಯ ತೀರ್ಮಾನವಾದ್ದರಿಂದ ರೈಲು ಟಿಕೆಟ್ ಕಾಯ್ದಿರಿಸುವುದು ಸಾಧ್ಯವಿರಲಿಲ್ಲವಾಗಿ, ನಾವು ಆಗ ದೆಹಲಿಯಿಂದ ತಿರುವನಂತಪುರಕ್ಕಿದ್ದ ಒಂದೇ ರೈಲಿನ ಬಾಲಂಗೋಚಿಯಾದ ಜನರಲ್ ಬೋಗಿಯನ್ನು ಏರಿದೆವು. ಎಲ್ಲಂದರಲ್ಲಿ ಮಲಗುತ್ತ ನೂಕುನುಗ್ಗಲಿನಲ್ಲಿ ಹೇಗೋ ಐವತ್ತಾರು ಗಂಟೆಗಳ ಪ್ರಯಾಣ ಸಾಗಿತು. ಆಮೇಲೂ ಅಷ್ಟೇ – ಪ್ರತಿದಿನ ಎರಡು ಅಥವಾ ಮೂರು ಊಟ, ವಸತಿಗೆ ಸಾಧ್ಯವಾದಷ್ಟೂ ಉಚಿತ ವ್ಯವಸ್ಥೆಗಳ ಹುಡುಕಾಟ – ಹೀಗೆ ಕೇರಳದ ದಕ್ಷಿಣದ ತುದಿಯಿಂದ ನಾವು ಉತ್ತರ ದಿಕ್ಕಿಗೆ ನಮ್ಮ ದಂಡಯಾತ್ರೆಯನ್ನು ಆರಂಭಿಸಿದೆವು. ಕಥಕ್ಕಳಿ, ಕೂಡಿಯಾಟ್ಟಮ್, ಕಳರಿಪಯ್ಯಟ್, ಮೋಹಿನಿಯಾಟ್ಟಂ, ಒಟ್ಟಂ ತುಳ್ಳಲ್, ಕೃಷ್ಣನಾಟ್ಟಂ, ತೆಯ್ಯಮ್ – ಹೀಗೆ ಆ ನಾಡಿನ ಪ್ರಮುಖ ಕಲೆಗಳನ್ನೂ, ಕಲಾಕೇಂದ್ರಗಳನ್ನೂ, ವ್ಯಕ್ತಿಗಳನ್ನೂ ಭೇಟಿಯಾಗುತ್ತ ಹೆಚ್ಚೂ ಕಮ್ಮಿ ಪ್ರತಿದಿನವೂ ಒಂದೊಂದು ಪ್ರದರ್ಶನ ನೋಡುತ್ತ ಕನ್ಯಾಕುಮಾರಿ, ತಿರುವನಂತಪುರ, ಕೊಚ್ಚಿನ್, ಗುರುವಾಯೂರು, ತ್ರಿಶೂರು, ಕಣ್ಣೂರು ಮಾರ್ಗದಲ್ಲಿ ನಡೆದ ಆ ಯಾತ್ರೆಯು ನಮಗೆ ರಂಗಭೂಮಿ ಅಂದರೇನು ಅನ್ನುವ ಬಗ್ಗೆಯೂ, ರಂಗಪ್ರಯೋಗಗಳನ್ನು ನೋಡಿ ಆಸ್ವಾದಿಸುವುದು ಹೇಗೆಂಬ ಕುರಿತೂ ಅತ್ಯಂತ ಗಹನವಾದ ಪಾಠಗಳನ್ನು ಕಲಿಸಿತ್ತು.

ಈ ಯಾತ್ರೆಯ ಇಡೀ ಪುರಾಣ ಬಿಚ್ಚುವುದಿಲ್ಲ; ನೇರವಾಗಿ ನನ್ನನ್ನು ಕಾಡುವ ಆ ಕಡೆಯ ದಿನಗಳಿಗೆ ಬರುತ್ತೇನೆ – ಆಗ ನಾವು ಬೇರೆಲ್ಲ ಊರು ಓಡಾಡಿ, ಉತ್ತರ ಕೇರಳದ ಕಣ್ಣೂರಿಗೆ ಬಂದು ಸೇರಿದ್ದೆವು; ಕಡಿಮೆ ಬೆಲೆಯ ಒಂದು ಲಾಡ್ಜಿನಲ್ಲಿ ಮೊಕ್ಕಾಂ ಮಾಡಿ ಸುತ್ತಮುತ್ತಲಿನ ಹಳ್ಳಿಗಳನ್ನು ಸುತ್ತಾಡುತ್ತ, ತೆಯ್ಯಮ್ ಪ್ರಕಾರದ ತುಣುಕುಗಳನ್ನು ನೋಡುತ್ತಿದ್ದೆವು. ಪುಣ್ಯಕ್ಕೆ, ಆಗ ತ್ರಿಶೂರು ನಾಟಕ ಶಾಲೆಯ ಮುಖ್ಯಸ್ಥರಾಗಿದ್ದ ಹೆಸರಾಂತ ಲೇಖಕ ಶಂಕರ ಪಿಳ್ಳೈಯವರು ಕಣ್ಣೂರಿನ ತಮ್ಮ ಸ್ನೇಹಿತರೊಬ್ಬರಿಗೆ ನಮ್ಮನ್ನು ಪರಿಚಯಿಸಿದ್ದರು. ಸ್ವಾರಸ್ಯದ ಜನ ಆತ: ಮಧ್ಯಮ ಆಳ್ತನದ ಎಣ್ಣೆಗಪ್ಪಿನ ದೇಹ, ಬೋಳುತಲೆಯ ಕುಂಕುಮದಾರಿ. ತುದಿಯವರೆಗೂ ಗುಂಡಿ ಹಾಕಿದ ಇಡೀ ತೋಳಿನ ಅಂಗಿ

